ಸಾಕ್ಷಿಯನ್ನು ದಿಃ 27.06.2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ</u> ಶ್ರೀ ಪಿ ಹೆಚ್ ಎಮ್ ವಕೀಲರಿಂದಃ**

1. ನಾನು ಹುಟ್ಟಿದ ದಿನಾಂಕ 13-08-1938 ಇರುತ್ತದೆ. ಈಗ ನನಗೆ ಅಂದಾಜು 85 ವರ್ಷ ಇರುತ್ತದೆ. ನಾನು ಕಳೆದ ಅಂದಾಜು 40-45 ವರ್ಷಗಳಿಂದ ದಸ್ತುಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. 40-45 ವರ್ಷದಿಂದ ಮಾಡಿದ ಕಾಗದಗಳ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಕಾಗದ ಪತ್ರಗಳನ್ನು ತೋರಿಸಿದಾಗ ಮಾತ್ರ ನನಗೆ ಕಾಗದ ಪತ್ರಗಳ ಬಗ್ಗೆ ಮಾಹಿತಿ ಬರುತ್ತದೆ ಎಂದರೆ ಸರಿ. ನನಗೆ ದಸ್ತುಬರಹಗಾರ ನೆಂದು ಲೈಸನ್ಸ ಇದ್ದು, ಸಾಕ್ಷಿದಾರನಾಗಿ ಸಹಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ನಮ್ಮ ನಡುವೆ ಹೊಂದಾಣಿಕೆ ಇರುವುದರಿಂದ ಸಾಕ್ಷಿದಾರನಾಗಿ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರವನ್ನು ತಯಾರಿಸಲು ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ನಾನೇ ಸ್ವಂತ ಬರೆದು ಕೊಟ್ಟಿರುತ್ತೇನೆ. ಸಾಕ್ಷಿ ನೀಡಲು ನ್ಯಾಯಾಲಯದಿಂದ ನನಗೆ ಸಮನ್ಸ ಬಂದಿರುವುದಿಲ್ಲ. ನಾನೇ ಸ್ವತಃ ಬಂದಿರುತ್ತೇನೆ. ಪ್ರತಿವಾದಿಯು ತನ್ನ ಪರವಾಗಿ ಸಾಕ್ಷಿ ನೀಡಲು ಹೇಳು ಎಂದು ನನಗೆ ಹೇಳಿದ್ದರಿಂದ ಈ ದಿನ ನಾನು ನ್ಯಾಯಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತು ಮುದ್ದತ್ತು ಇದೆ ಎಂದು ವಕೀಲರು ಹೇಳಿರುತ್ತಾರೆ. ಪ್ರಮಾಣ ಪತ್ರವನ್ನು ಬರೆಯಲು ದಾಖಲಾತಿಗಳನ್ನು ನೋಡಿಯೇ ಬರೆಯಬೇಕು ಎಂದರೆ ಸರಿ.

2. ನಾನು ಹರ್ಲಾಪುರ ದಿಂದ ಗದಗಗೆ Travel ಮಾಡುತ್ತಿದ್ದೇನು. ನನಗೆ ವಾದಿ ಪ್ರತಿವಾದಿಯ ಪರಿಚಯ ಇದೆ. ದಾಖಲೆಯನ್ನು ಬರೆಯುವುದಕ್ಕಿಂತ ಮೊದಲಿನಿಂದ ವಾದಿ ಪ್ರತಿವಾದಿಯ ಪರಿಚಯ ಇದೆ. ವಾದಿ ಹಾಗೂ ಪ್ರತಿವಾದಿ ಯಾರು ಕಳೆದ 12 ವರ್ಷದಿಂದ ಪರಿಚಯ ಇರುತ್ತಾರೆ. ದೇವಮ್ಮ ಮತ್ತು ಶಿವಾನಂದರು ಹರ್ಲಾಪುರದಲ್ಲಿ ಬೀಗರು ಇರುವುದರಿಂದ ಬರುತ್ತಿದ್ದರು. ಯಾರ ಬೀಗರು ಎನ್ನುವುದು ನನಗೆ ಗೊತ್ತಿಲ್ಲ. ದೇವಮ್ಮ ಮತ್ತು ಶಿವಾನಂದರಿಗೆ ಆಗ ಎಷ್ಟು ವರ್ಷ ವಯಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. ದೇವಮ್ಮ ಮತ್ತು ಶಿವಾನಂದರದು ಮದುವೆಯಾಗಿತ್ತು. 10-12 ವರ್ಷಗಳ ಹಿಂದೆ ಶಿವಾನಂದರ ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ. 10-12 ವರ್ಷಗಳ ಹಿಂದೆ ಶಿವಾನಂದ ನು ಯಾವ ಕೆಲಸ ಮಾಡುತ್ತಿದ್ದನು ಎಂದು ನನಗೆ ಅಷ್ಟಾಗಿ ಗೊತ್ತಿಲ್ಲ.

ಶಿವಾನಂದನು ದೇವಮ್ಮಳಿಗೆ ತಮ್ಮ ಆಗಬೇಕು. ಶಿವಾನಂದನಿಗೆ ಮಕ್ಕಳಿಲ್ಲ. ದೇವಮ್ಮಳ ಮದುವೆಯಾಗಿರುತ್ತದೆ. ದೇವಮ್ಮಳಿಗೆ ಎಷ್ಟು ಜನ ಮಕ್ಕಳಿದ್ದಾರೆಂದು ಗೊತ್ತಿಲ್ಲ. ದೇವಮ್ಮಳಿಗೆ ಮಲ್ಲಸಮುದ್ರದ ಗ್ರಾಮದವರಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಶಿವಾನಂದನು ಅಸುಂಡಿಯಲ್ಲಿ ವಾಸಿಸುತ್ತಿದ್ದನು.

3. ದಾಖಲೆಯನ್ನು ತಯಾರಿಸುವ ಕಾಲಕ್ಕೆ ದೇವಮ್ಮ,ಶಿವಾನಂದ ಮತ್ತು ಸಾಕ್ಷಿದಾರರು ಬಂದಿರುತ್ತಾರೆ. ಅವರು ನನ್ನ ಕಡೆಗೆ ಬೆಳಿಗ್ಗೆ 09.00-10.00 ಗಂಟೆಗೆ ಬಂದಿದ್ದರು. ಮೊದಲು ನನಗೆ ಶಿವಾನಂದ ಮತ್ತು ದೇವಮ್ಮ ಇಬ್ಬರು ಸೇರಿ ಬಂದು ಭೇಟಿಯಾಗಿರುತ್ತಾರೆ. ರೊಟ್ಟಿಯವರಿಗೆ ಕಾಗದವನ್ನು ತಯಾರಿಸಲು ಮಾಹಿತಿಯನ್ನು ಕೊಟ್ಟಿರುತ್ತಾರೆ. ಕಾಗದ ಪತ್ರಕ್ಕೆ ನಾನು ಸಾಕ್ಷಿ ಮತ್ತು ಗುರುತಿನ ಸಾಕ್ಷಿ ಎಂದು ಸಹಿ ಹಾಕಿರುತ್ತೇನೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ ಹಾಗೆ ದೇವಮ್ಮ ಮತ್ತು ಶಿವಾನಂದ ತಮ್ಮ ಮನೆತನದ ವ್ಯವಹಾರಗಳನ್ನು ಲೆಕ್ಕಾಚಾರ ಮಾಡಿ ನಾನು ಹೇಳುವ ಹಾಗೆ ಹೊಂದಾಣಿಕೆ ಮಾಡಿಕೊಂಡ ಬಗ್ಗೆ ಕಾಗದ ಪತ್ರದಲ್ಲಿ ನಮೂದಿಸಿಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ ಹಾಗೆ ಲೆಕ್ಕಾಚಾರದ ಬಗ್ಗೆ ನಾನು ಸ್ವಂತ ಹೇಳಿ ಬರೆಸಿರುತ್ತೇನೆ. ಬಾಂಡ ಆಗುವ ಕಾಲಕ್ಕೆ ತಮ್ಮ ತಮ್ಮ ನಡುವೆ ಮಾತು ಕತೆ ಮಾಡಿಕೊಂಡು ಬಾಂಡ ತಯಾರಿಸಿಕೊಂಡಿರುತ್ತಾರೆ. ರೊಟ್ಟಿಯವರಿಗೆ ನಾನು ಮಾಹಿತಿಯನ್ನು ಕಾಗದ ಪತ್ರವನ್ನು ತಯಾರಿಸಲಾಗಿದೆ ಎಂದರೆ ಸರಿಯಲ್ಲ. ಅವರು ಮಾಹಿತಿಯನ್ನು ಕೊಟ್ಟಿರುತ್ತಾರೆ. ಬಾಂಡನ್ನು ಹೇಳಿ ಬರೆಯಿಸಿ ಮುಗಿದಾಗ ಮಧ್ಯಾಹ್ನ ಅಂದಾಜು 12.00 ಗಂಟೆಯಾಗಿರುತ್ತದೆ. ಇನ್ನೊಬ್ಬ ಸಾಕ್ಷಿದಾರರು ಹೊಂಬಳ ಗ್ರಾಮದವರು. ಅವರು ನನಗೆ ಪರಿಚಯಸ್ಥರು ಎಂದರೆ ಸರಿ. ಅವರು ನನ್ನ ಕಡೆಗೆ ಹಿಂದೆ ಕಾಗದ ಮಾಡಿಸಿಕೊಳ್ಳುತ್ತಿದ್ದು, ಬಂದು ಸಹಿ ಮಾಡುತ್ತಿದ್ದರು ಎಂದರೆ ಸರಿ. ಒಬ್ಬರಿಗೊಬ್ಬರಿಗೆ ಅನುಕೂಲವಾಗಲೆಂದು ಸಹಿ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ದೇವಮ್ಮ ನಾನು ಹೇಳುವ ದಿನದಂದು ಬಂದಿರಲಿಲ್ಲ, ಯಾವುದೇ ಮಾಹಿತಿಯನ್ನು ಕೊಟ್ಟಿಲ್ಲ, ಶಿವಾನಂದನಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ದಾಖಲೆಯನ್ನು ತಯಾರಿಸುವಾಗ ವಾದಿಯ ಗಂಡ ಮತ್ತು ಮಕ್ಕಳು ಮಾಹಿತಿಯನ್ನು ಕೊಟ್ಟಿಲ್ಲ. ಆ ದಿನ ವಾದಿಯ ಗಂಡ ಮತ್ತು ಮಕ್ಕಳು ಇರಲಿಲ್ಲ. ಶಿವಾನಂದನ ಜೊತೆಗೆ

D.W.-1

ಮಿಲಾಪಿಯಾಗಿ ಆತನಿಗೆ ಸಹಾಯವಾಗಲೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಂಡ ಆಗುವ ದಿನದಂದು ಉಷಾ ಇರಲಿಲ್ಲ. ಈ ದಿನ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಗದಗ.